ಪಿ.ಡಬ್ಲ್ಯು–೧

ದಿ: ೫.೧೨.೨೦೨೩ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ, ಮುಂದುವರೆದ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ಪ್ರತಿವಾದಿ ಪರ ಶ್ರೀ ಎಂ.ವಿ.ಎಸ್. ವಕೀಲರಿಂದ,

ನಾನು ಕ್ರಯ ಪತ್ರ ಹೊರತುಪಡಿಸಿ, ದಾವಾ ಆಸ್ತಿಯ ಮೂಲ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಮೂಲ ದಾಖಲೆಗಳು ನನ್ನ ಬಳಿ ಇಲ್ಲ. ದಾವಾ ಆಸ್ತಿ ಚಕ್ಕುಬಂದಿ ತೋರಿಸಲು ಸರ್ವೆ ಇಲಾಖೆಯ ದಾಖಲೆಯ ಟಿಪ್ಪಣಿ , ಆಕರಾ ಬಂದ್ ಮತ್ತು ನಕಾಶೆಯನ್ನು ಹಾಜರುಪಡಿಸಿಲ್ಲ. ನನ್ನ ಬಳಿ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.೩ ಇದು ಮೂಲತ: ಗೋಮಾಳ ಜಮೀನು ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಕ್ರಯದಾರರು ದಾವಾ ಆಸ್ತಿಯನ್ನು ಬೇರೆಯವರಿಂದ ಕ್ರಯಕ್ಕೆ ಪಡೆದಿದ್ದರು. ನನ್ನ ಕ್ರಯದಾರರ ಕ್ರಯ ಪತ್ರವನ್ನು ನಾನು ಹಾಜರುಪಡಿಸುತ್ತೇನೆ. ಸರ್ವೆ ನಂ.೩ ಇನ್ನು ಪೋಡಿ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಪೋಡಿ ಆಗದೇ ಇರುವುದರಿಂದ ದಾವಾ ಆಸ್ತಿ ಎಲ್ಲಿದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ತನ್ನ ಕ್ರಯ ಪತ್ರದಲ್ಲಿ ಚಕ್ಕುಬಂದಿ ಇದ್ದು, ತಾನು ಸ್ವಾಧೀನದಲ್ಲಿ ಇದ್ದೇನೆ ಎನ್ನುತ್ತಾರೆ. ನನ್ನ ಕ್ರಯದಾರರಿಗೆ ಆಸ್ತಿ ಹೇಗೆ ಬಂತು ಎಂದು ತಿಳಿದುಕೊಳ್ಳಲು ನನ್ನದು ಯಾವುದೇ ಅಭ್ಯಂತರ ಇರಲಿಲ್ಲ. ಮೂಲ ದಾಖಲೆಗಳ ಕುರಿತು ತಿಳಿದುಕೊಳ್ಳಲು ಅಭ್ಯಂತರ ಇರಲಿಲ್ಲ.

ನಿಪಿ.೧ ರಂತೆ ದಿ: ೫.೦೯.೧೯೮೦ ರಂದು ಕ್ರಯಕ್ಕೆ ಪಡೆದಿರುವುದಾಗಿ ನಮೂದಿದೆ ಎಂದರೆ ಸರಿ. ನಿಪಿ.೨ ರಲ್ಲಿ ಎಂ.ಆರ್.ನಂ.೪/೧೯೯೦–೯೧ ನೇದರಲ್ಲಿ ದಿ: ೧೧.೧೧.೧೯೮೦ ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.೩/೮ ೨ ಎಕರೆ ಇದು, ಎ.ಕೆ.ಮುನಿಕದಿರಪ್ಪ ಇವರಿಗೆ ಮಂಜೂರಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಸಂಬಂಧೀಕರಲ್ಲ. ಎ.ಕೆ.ಮುನಿಕದಿರಪ್ಪರಾಗಲಿ ಅಥವಾ ಪ್ರತಿವಾದಿಯರಾಗಲಿ ಆಸ್ತಿ ಮಾರಾಟ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎ.ಕೆ.ಮುನಿಕದಿರಪ್ಪನ ಕಾಲದಿಂದಲೂ ಪ್ರತಿವಾದಿಯರೇ ಎರಡು ಎಕರೆ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಎರಡು ಎಕರೆಗೆ ಸಂಬಂಧಿಸಿದಂತೆ ರೆವಿನ್ಯೂ ದಾಖಲೆಗಳು ಮುನಿಕದಿರಪ್ಪ ಇವರ ಹೆಸರಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ದಿ: ೨೧.೦೯.೨೦೧೪ ರಂದು ಪ್ರತಿವಾದಿಯರು ನನಗೆ ತೊಂದರೆ ನೀಡಿದರು ಎಂದು ಸುಳ್ಳು ಬರೆಸಿದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನನಗೆ ತೊಂದರೆ ನೀಡಿಲ್ಲ. ಪ್ರತಿವಾದಿಯ ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಪ್ರತಿವಾದಿಯರಿಗೆ ಸೇರಿದ್ದು, ನನಗೂ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲಿಲ್ಲ, ಪ್ರತಿವಾದಿಯರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಅವರ ತಾತನ ಕಾಲದಿಂದಲೂ ಮತ್ತು ಮೂರು ತಲೆಮಾರುನಿಂದಲು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಖಾಯಂ ಮನಾಯಿ ಆದೇಶಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**